ಕೂಡ ತಮ್ಮ ಸಾಹಿತ್ಯದ ಬಗ್ಗೆ ಸರಿಯಾದ ವಿಮರ್ಶೆ ಬಂದೇ ಇಲ್ಲವೆನ್ನುವುದನ್ನು ಕೇಳಿದ್ದೇವೆ. ಇನ್ನು ಹೊಸತಲೆಮಾರಿನ ಬರಹಗಾರರ ಸಾಹಿತ್ಯದ ಬಗ್ಗೆ ಸರಿಯಾದ ಅನ್ನುವುದಕ್ಕಿಂತ ಸಮಗ್ರವಾದ ಒಳನೋಟಗಳನ್ನಿಟ್ಟುಕೊಂಡು ಬಂದಿರುವ ವಿಮರ್ಶೆ ತೀರ ವಿರಳ.

2 ತಮ್ಮ ಕೃತಿಗಳ ಬಗ್ಗೆ ನಂಬಿಕೆ ಪ್ರೀತಿ ಇದ್ದರೆ ಸಾಕು. ವಿಮರ್ಶೆ ಬರಲೇಬೇಕು ಎಂದು ಬಯಸುವುದು, ಅಥವ ಗೊತ್ತಿರುವವರ ಕೈಲಿ ಕೇಳಿ ಬರೆಸಿಕೊಳ್ಳುವುದು ಮೂರ್ಖತನ. ಬರಹಕ್ಕೆ ಶಕ್ತಿಯಿದ್ದರೆ ಅದು ಯಾರ ಕೈಯಿಂದಲಾದರೂ ಬರೆಸಿಕೊಳ್ಳುತ್ತದೆ. ಅದಕ್ಕೆ ದೂರುವ ಆವಶ್ಯಕತೆ ಇಲ್ಲ.

3 ಇತ್ತೀಚೆಗೆ ಸಾಕಷ್ಟು ಇಂತಹ ಬರಹಗಳನ್ನು ನಾನು ಸಾಮಾಜಿಕ ಜಾಲತಾಣಗಳಲ್ಲಿ ಗಮನಿಸುತ್ತಿದ್ದೇನೆ. ಅಂದರೆ ಸಹೃದಯ ಓದುಗರು ತಮ್ಮ ಸಮಕಾಲೀನರ ಕೃತಿಗಳನ್ನು ಓದಿ, ಅಲ್ಲಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಇದನ್ನು ಖಚಿತವಾಗಿ ವಿಮರ್ಶೆ ಎನ್ನಲಾಗದಿದ್ದರೂ ಒಂದು ಪ್ರಾಮಾಣಿಕ ಓದಿನ ಅನುಭವ ಎಂದು ಹೇಳಬಹುದು. ಇಂತಹ ಕಡೆಗಳಲ್ಲಿ ವಸ್ತುನಿಷ್ಠ ವಿಮರ್ಶೆಗಿಂತ ತಮಗೆ ದಕ್ಕಿದ ಕೆಲ ಸಕಾರಾತ್ಮಕ ಅಂಶಗಳೇ ಹೆಚ್ಚಾಗಿರುತ್ತವೆ. ಇದು ಲೇಖಕನ ಮಟ್ಟಿಗೆ ಉತ್ತೇಜನವೂ ಹೌದು, ಮಿತಿಯೂ ಹೌದು. 'ಪ್ರಜಾವಾಣಿ'ಯಂತಹ ಕೆಲವಾದರೂ ಪತ್ರಿಕೆಗಳು ಈಗಲೂ ವ್ರತದಂತೆ ಪ್ರತಿವಾರ ತಮಗೆ ಬಂದ ಪುಸ್ತಕಗಳಲ್ಲಿ ಆಯ್ಕೆ ಮಾಡಿ ಕೆಲ ಒಳ್ಳೆಯ ಬರಹಗಾರರಿಂದ ವಿಮರ್ಶೆಯನ್ನು ಬರೆಸಿಕೊಂಡು ಬರುತ್ತಿವೆ. ಇದನ್ನೂ ಪರಿಪೂರ್ಣವೆಂದು ಭಾವಿಸುವಂತಿಲ್ಲ. ಏಕೆಂದರೆ ನಮ್ಮಲ್ಲಿ ಈಗೀಗ ಬರುತ್ತಿರುವ ಪುಸ್ತಕಗಳ ಸಂಖ್ಯೆಯನ್ನು ನೋಡಿದರೆ ಎಲ್ಲ ಪುಸ್ತಕಗಳಿಗೂ ವಿಮರ್ಶೆಯ ಒರೆಹಚ್ಚುವುದು ರಾಗಿಯ ಚೀಲದಲ್ಲಿ ಸಾಸಿವೆ ಹುಡುಕುವಷ್ಟೇ ಪ್ರಯಾಸದ ಕೆಲಸ. ಇದಕ್ಕೆ ಪರ್ಯಾಯವಾಗಿ ಓದುಗರು ಸಾಮಾಜಿಕ ಜಾಲತಾಣಗಳಲ್ಲಿ ತಮಗೆ ದಕ್ಕಿದ ತಿಳಿವನ್ನು ಹಂಚಿಕೊಳ್ಳಿವಲ್ಲಿ ಸಫಲರಾಗುತ್ತಿದ್ದಾರೆ. ಇದೊಂದು ಒಳ್ಳೆಯ ಬೆಳವಣಿಗೆ. ಗಮನಿಸಬೇಕಾದ ಅಂಶವೆಂದರೆ ಇವರು ವಿಮರ್ಶಕರು ಎಂದು

